

## ಸೈಲೆಂಟ್ ಸೋನಾಕ್ಷಿ

ಕೊರೊನಾ ಲಾಕ್‌ಡೌನ್ ಅವಧಿಯಲ್ಲಿ ಬಾಲಿವುಡ್‌ನ ಹಲವು ನಟೀಮಣಿಯರು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿದ್ದು ಪ್ರೇಕ್ಷಕರ ಕಣ್ಣ ಕ್ಷಿತಿಜದಲ್ಲಿ ಕಾಣಿಸಿಕೊಳ್ಳುತ್ತಲೇ ಇದ್ದರು. ಪ್ರಿಯಾಂಕಾ, ಕರೀನಾ, ಕತ್ರೀನಾ, ಪರಿಣೀತಾ, ವಿದ್ಯಾ ಬಾಲನ್, ಮಾಧುರಿ, ಜಾಹ್ನವಿ, ಸಾರಾ ಅಲಿ ಖಾನ್ ಹೀಗೆ ಯಾರೂ ಇದಕ್ಕೆ ಹೊರತಾಗಿರಲಿಲ್ಲ. ಮನೆಯಲ್ಲಿ ಅಡುಗೆ ಮಾಡುವುದು, ಜಿಮ್ ಮಾಡುವುದು, ಹೊಸ ಬಟ್ಟೆಯಲ್ಲಿ ಮಿಂಚುವುದು, ಪಾರ್ಟಿ ಮಾಡುವುದು ಮುಂತಾಗಿ ಒಂದಲ್ಲ ಒಂದು ಚಟುವಟಿಕೆಯ ಫೋಟೊ, ವಿಡಿಯೊಗಳನ್ನು ಇವರು ಜಾಲತಾಣದಲ್ಲಿ ಏರಿಸುತ್ತಲೇ ಇದ್ದರು. ಆದರೆ ಒಬ್ಬಾಕೆ ಸೋನಾಕ್ಷಿ ಸಿನ್ಹಾ ಮಾತ್ರ ಈ ಅವಧಿಯಲ್ಲಿ ಹೆಚ್ಚು ಗದ್ದಲ ಮಾಡಿದವಳಲ್ಲ. ತಾನಾಯಿತು, ತನ್ನ ಮನೆಯಾಯಿತು ಎಂದು ಸೈಲಂಟಾಗಿಯೇ ಇದ್ದಳು.

ಈಗ ಕೊರೊನಾ ರಜೆಯಿಂದ ಹೊರಬರಲು ಸೋನಾಕ್ಷಿಯೂ ಕಾತರಿಸುತ್ತಿದ್ದಾಳೆ. 'ಸೆಟ್‌ಗೆ ಯಾವಾಗ ಹೋಗಿಲ್ಲ ಎಂದು ಕೈ ತುರಿಸುತ್ತಿದೆ. ಇಷ್ಟು ದೊಡ್ಡ ಬ್ರೇಕ್ ನಾನೆಂದೂ ಬಯಸಿರಲಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ನಾನು ನಾನ್‌ಸ್ಟಾಪ್ ಆಗಿ ಕೆಲಸ ಮಾಡಿದ್ದೆ. ಇಡೀ ಉದ್ಯಮವೇ ಸ್ಥಗಿತಗೊಂಡದ್ದು ನಿಜಕ್ಕೂ ಬೇಜಾರಾಯಿತು' ಎಂದು ಆಕೆ ಹೇಳಿದ್ದಾಳೆ.

'ಧಬಾಂಗ್'ನ ಯಶಸ್ಸಿನ ಮೋಡಿಯಿಂದ ಸೋನಾಕ್ಷಿ ಇನ್ನೂ ಹೊರಬಂದಿಲ್ಲ. ಏಕೆಂದರೆ, ಆಕೆಗೆ ತನ್ನ ವೃತ್ತಿಜೀವನದಲ್ಲಿ 'ಧಬಾಂಗ್' ಎಷ್ಟು ಮಹತ್ವದ್ದು ಎನ್ನುವುದು ಚೆನ್ನಾಗಿ ಗೊತ್ತಿದೆ. 'ನಾನು ಕಮರ್ಷಿಯಲ್ ಯಶಸ್ಸು ಕಾಣಲು ಮುಖ್ಯ ಕಾರಣ ಆ ಸಿನಿಮಾ. ಅದೇ ತರಹದ ಪಾತ್ರಗಳು ಹಲವು ಬಂದಾಗ ನಾನು ಖುಷಿಯಾಗಿಯೇ ಸ್ವೀಕರಿಸಿದೆ. ಧಬಾಂಗ್‌ನ ಯಶಸ್ಸು ನನ್ನ ಆತ್ಮವಿಶ್ವಾಸವನ್ನು ಎಷ್ಟು ಹೆಚ್ಚಿಸಿತೆಂದರೆ, ಆ ಬಳಿಕ ಹೀರೋಗೆ ಮಹತ್ವವೇ ಇಲ್ಲದ ಸಿನಿಮಾಗಳಲ್ಲೂ ನಾನು ಇಡೀ ಚಿತ್ರದ ಜವಾಬ್ದಾರಿಯನ್ನು ಒಬ್ಬಳೇ ಹೆಗಲಿಗೇರಿಸಿಕೊಂಡು ನಟಿಸಿದೆ' ಎಂದಿದ್ದಾಳೆ ಸೋನಾಕ್ಷಿ.

ಸದ್ಯಕ್ಕೆ ಸೋನಾಕ್ಷಿ ಕೈಯಲ್ಲಿ ಎರಡು ಸಿನಿಮಾಗಳಿವೆ. 'ಘೂಮಕೇತು' ಚಿತ್ರದಲ್ಲಿ ಆಕೆಯದ್ದು ವಿಶೇಷ ಪಾತ್ರ. 'ಭುಜ್: ದಿ ಪ್ರೈಡ್ ಆಫ್ ಇಂಡಿಯಾ' ಚಿತ್ರದಲ್ಲಿ ಅಜಯ್ ದೇವಗನ್ ಎದುರು ನಾಯಕಿಯ ಪಾತ್ರ. 'ಇನ್ನೆರಡು ವಾರಗಳಲ್ಲಿ ನನ್ನ ಶೂಟಿಂಗ್ ಶುರುವಾಗಲಿದೆ' ಎಂದಿದ್ದಾಳೆ ಸೋನಾಕ್ಷಿ. ■



## ಪ್ರಿಯಾಂಕಾ: ಫುಲ್ ಬ್ಯುಸಿ

'ದಿ ವೈಟ್ ಟೈಗರ್' ಹಿಂದಿ ಸಿನಿಮಾದ ಕುರಿತು ಪ್ರಿಯಾಂಕಾ ಚೋಪ್ರಾ ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾಳೆ. ಅರವಿಂದ ಅಡಿಗ ಬರೆದ ಈ ಕಾದಂಬರಿ 'ದಿ ನ್ಯೂಯಾರ್ಕ್ ಟೈಮ್ಸ್'ನ ಬೆಸ್ಟ್ ಸೆಲ್ಲರ್ ಕಾದಂಬರಿಯಾಗಿ ಸುದ್ದಿ ಮಾಡಿತ್ತು. ಕಾದಂಬರಿ ಆಧರಿಸಿ ಅದೇ ಹೆಸರಲ್ಲಿ ಈಗ ಸಿನಿಮಾ ಬರಲಿದೆ. ಪ್ರಿಯಾಂಕಾಗೆ ಅದರಲ್ಲಿ ಪ್ರಮುಖ ಪಾತ್ರ. ರಾಜ್‌ಕುಮಾರ್ ರಾವ್ ಮತ್ತು ಆದರ್ಶ್ ಗೌರವ್ ಇನ್ನೆರಡು ಪ್ರಮುಖ ಪಾತ್ರಗಳಲ್ಲಿ ಇದ್ದಾರೆ.

'ಇದೊಂದು ಅದ್ಭುತ ಚಿತ್ರವಾಗಲಿದೆ. ಚಿತ್ರದ ಪ್ರಮುಖ ಪಾತ್ರ ಬಲರಾಂ ಹಲ್ವಾಯಿ. ಈ ಪಾತ್ರದಲ್ಲಿ ನಟಿಸಿದ ಹೊಸಬ ಆದರ್ಶ್ ಗೌರವ್ ನಿಜಕ್ಕೂ ಅದ್ಭುತ ನಟ. ಇಂತಹ ಹೊಸ ಪ್ರತಿಭೆಯನ್ನು ನಾನೆಂದೂ ನೋಡಿಲ್ಲ' ಎಂದು ಪ್ರಿಯಾಂಕಾ ಮುಕ್ತಕಂಠದಿಂದ ಸ್ವಾಗತಿಸಿದ್ದಾಳೆ. ನಿರ್ದೇಶಕ ರಾಮಿನ್ ಬಹ್ರಾನಿ ಚಿತ್ರವನ್ನು ಜನವರಿಯಲ್ಲಿ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದ್ದಾರೆ.

ಈ ಮಧ್ಯೆ ಹಾಲಿವುಡ್‌ನಲ್ಲಿ ಪ್ರಿಯಾಂಕಾ ನಟಿಸುತ್ತಿರುವ ಹೊಸ ಚಿತ್ರವೊಂದು ಸೆಟ್ಟೇರಿದೆ. ಜರ್ಮನ್ ಭಾಷೆಯಲ್ಲಿ 2016ರಲ್ಲಿ ಬಂದ 'ಎಸ್‌ಎಂಎಸ್ ಫರ್ ಡಿಚ್' ಹೆಸರಿನ ಸಿನಿಮಾ ರಿಮೇಕ್ ಇಂಗ್ಲಿಷ್‌ನಲ್ಲಿ ಆಗಲಿದೆ. ಗ್ರಾಮ್ಮೀ ವಿಜೇತೆ ಸೆಲೈನ್ ಡಿಯಾನ್, ನಟರಾದ ಸ್ಯಾಮ್ ಹ್ಯೂಗನ್ ಮತ್ತು ಜಿಮ್ ಸ್ಟ್ರಾಸ್ ಈ ಚಿತ್ರದಲ್ಲಿ ಪ್ರಿಯಾಂಕಾ ಜೊತೆಗೆ ನಟಿಸುತ್ತಿದ್ದಾರೆ. ನೆಟ್‌ಫ್ಲಿಕ್ಸ್‌ನಲ್ಲಿ ಯಶಸ್ಸು ಕಂಡ 'ಔಟ್‌ಲ್ಯಾಂಡರ್' ಸರಣಿಯಲ್ಲಿ ನಟಿಸಿರುವ ಸ್ಯಾಮ್ ಹಾಲಿವುಡ್‌ನಲ್ಲಿ ಈಗ ಸಾಕಷ್ಟು ಜನಪ್ರಿಯ. ಚಿತ್ರಕ್ಕೆ ಸದ್ಯಕ್ಕೆ 'ಟೆಕ್ಸ್ಟ್ ಫಾರ್ ಯು' ಎಂದು ಹೆಸರಿಡಲಾಗಿದೆಯಂತೆ. 'ಮ್ಯಾಟ್ರಿಕ್ಸ್ 4' ನಲ್ಲಿ ಪ್ರಿಯಾಂಕಾ ನಟಿಸುವುದು ಖಾತ್ರಿಯಾ ಬೆನ್ನಲ್ಲೇ ಇನ್ನೊಂದು ಇಂಗ್ಲಿಷ್ ಚಿತ್ರದ ಘೋಷಣೆಯಾಗಿರುವುದು ಪ್ರಿಯಾಂಕಾಳ ಗಂಡ ನಿಕ್ ಜೊನಾಸ್‌ಗೆ ಖುಷಿ ತಂದಿದೆಯಂತೆ. ಅಂದ ಹಾಗೆ ನಿಕ್ ಜೊನಾಸ್ ಜೊತೆಗೂಡಿ ಅಮೆಜಾನ್ ನಲ್ಲಿ ಹೊಸ ಷೋ ಒಂದನ್ನೂ ಪ್ರಿಯಾಂಕಾ ನಡೆಸುವುದು ಖಚಿತವಾಗಿದೆ. ಒಟ್ಟಾರೆ ಪ್ರಿಯಾಂಕಾ ಜಾಗತಿಕ ನಟಿಯಾಗಿ ಬ್ಯುಸಿ.

■ ಬಿಂದು